Regd No B G 155 31-1-1970

SATYAVADI Daily, MYSORE 4 ★ 53 rd Year of Publication

Golden Jubilee Celebrated Paper

# ಸತ್ಯವಾದಿ

ಸ್ವರ್ಣ ಮಹೋತ್ಸವ ಸಂದರ್ಭದಲ್ಲಿ ಪ್ರಕಟವಾಗುತ್ತಿರುವ ಪತ್ರಿಕೆ

ಸ್ಥಾಪಕರು: ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣ ರಾವ್ [ 2 ಸೆ.ಸಿ

## ❁ ಹರಯಾಣದಲ್ಲಿ ದಾಂಧಲೆ – ಗೋಳೀಬಾರ್ – ಸೆನಕೆ ಕರೆ ❁

### ಮಾರಕ್ಸಿಸ್ಟ್ ಸದಸ್ಯರ ದಾಂಧಲೆ

ತ್ರಿವೇಂಡ್ರಂ— ಕೇರಳ ಅಸೆಂಬ್ಲಿಯಲ್ಲಿ ಸೆನ್ನೆ ಮಾರಕ್ಸಿಸ್ಟ್ ಸದಸ್ಯರು ಸ್ಪೀಕರನ್ನು ಹೊಡೆಯಲು ಹೋದಾಗ ಅವರಕೊಠಡಿಗೆ ಕರೆತರಲಾಯಿತು ; ಶಾಸನಸಭೆಯ ಸೇವಕರು ಮತ್ತು ಪೋಲೀಸು ಇನ್ಸ್ಪೆಕ್ಟರನ್ನು ಹೊಡೆದರು – ರೆಕಾರ್ಡುಗಳನ್ನು ಹರಿದು ಹಾಕಿದರು : ಮೈಕ್, ಪೇಪರ್‌ವೇಟ್ ಮುಂತಾದ್ದನ್ನು ಎಸೆದರು – ಸ್ಪೀಕರು ೫ ಮಾರಕ್ಸಿಸ್ಟ್ ಸದಸ್ಯರನ್ನು ಈ ಅಧಿವೇಶನ ಪೂರ್ತಿ ಸಸ್ಪೆಂಡು ಮಾಡಿದರು.

○

### ರಿಮ್ಯಾಂಡು

ಕೊಯಮುತ್ತೂರ— ದಸ್ತಗಿರಿ ಮಾಡಲ್ಪಟ್ಟ ಮೈಸೂರು ಶಾಸಕರನ್ನು 15 ದಿನ ರಿಮಾಂಡು ಮಾಡಲಾಗಿದೆ.

★

### ನಿರ್ಧಾರ ಪ್ರತಿಭಟನೆ

ಚಂಡೀಘರ್— ಚಂಡೀಘರವು ಪಂಜಾಬಿಗೆ ಸೇರಿಸುವ ಸರ್ಕಾರದ ನಿರ್ಧಾರವನ್ನು ಪ್ರತಿಭಟಿಸಿ ಹರತಾಳಕ್ಕೆ ಕರೆ ಕೊಡಲಾಗಿದೆ – ಹರಯಾಣಾ ಮಂತ್ರಿಗಳು. ರಾಜ್ಯ ಶಾಸಕರು, ಪಾರ್ಲಿಮೆಂಟು ಸದಸ್ಯರು ರಾಜೀನಾಮೆ ಕೊಡಲು ನಿರ್ಣಯಿಸಲಾಗಿದೆ.

●

### ನೆಕ್ಸಲೈಟರು

ಬೆಂಗಳೂರು— ನೆಕ್ಸಲೈಟರ ಬೆದರಿಕೆ ವಿಷಯ ಸರ್ಕಾರಕ್ಕೆ ಗೊತ್ತಿದೆಯೆಂದೂ ಅವರ ಚಟುವಟಿಕೆ ವಿರುದ್ಧ ಮುನ್ನೆಚ್ಚರಿಕೆ ತೆಗೆದುಕೊಳ್ಳಲಾಗಿದೆಯೆಂದೂ ವಿಧಾನ ಪರಿಷತ್ತಿನಲ್ಲಿ ತಿಳಿಸಲಾಯಿತು – ರಾಜ್ಯದಲ್ಲಿ ನೆಕ್ಸಲೈಟರ ಯಾವ ರೀತಿಯ ಚಟುವಟಿಕೆಯನ್ನು ಸಹಿಸಲಾಗುವುದೆಂದೂ ತಿಳಿಸಲಾಯಿತು.

### ಹಡಗು ನಾಪತ್ತೆ

ಕಲ್ಲೀಕೋಟಿ— ಲಕ್ಷದ್ವೀಪಗಳಿಗೆ ಸೇರಿದ ೫ ಮಂದಿ ಚಾಲಕರ ತಂಡವಿದ್ದ ಒಂದು ಹಡಗು ಬಿರುಗಾಳಿಗೆ ಸಿಕ್ಕಿ ನಾಪತ್ತೆಯಾಗಿದೆ.

○

### ನಂಬೂದರಿಪಾದರ ನುಡಿ

ತ್ರಿವೇಂಡ್ರಂ— ಅಲಪ್ಪಿಯಲ್ಲಿನ ಒಂದು ಬಹಿರಂಗ ಸಭೆಯಲ್ಲಿ ಮಾತನಾಡುತ್ತ ಮಾಜಿ ಮುಖ್ಯಮಂತ್ರಿ ಶ್ರೀ ನಂಬೂರಿಪಾದರು ತನು ಪಾರ್ಟಿಯು ಈಗಿನ ಮಂತ್ರಿ ಮಂಡಲವನ್ನು ಕಿತ್ತುಹಾಕಲು ಆಯುಧ ಕೂಡ ಧರಿಸುವುದೆಂದು ಹೇಳಿದರು – ಪೋಲೀಸರ ಪುಂಡಾಟಿಕೆಯನ್ನು ಮುಟ್ಟಿ ಹಾಕಲು ಮಾರಕ್ಸಿಸ್ಟರು ಏನು ಜೀಕಾದರೂ ಮಾಡುವರೆಂದು ಹೇಳಿದರು

★

### ಪಾಕಿಸ್ತಾನದಲ್ಲಿ ಕ್ಷಿಪಣಿ ತಯಾರಿಕೆ

ನವದೆಹಲಿ— ಪಶ್ಚಿಮ ಜರ್ಮನಿಯ ಒಂದು ವಾಣಿಜ್ಯ ಸಂಸ್ಥೆಯ ನೆರವಿನಿಂದ ಪಾಕಿಸ್ತಾನವು ಟ್ಯಾಂಕು-ವಿರುದ್ಧದ ಕ್ಷಿಪಣಿಗಳನ್ನು ತಯಾರಿಸಲು ಪ್ರಾರಂಭಿಸಿದೆ.

★

### ಮೋಸಗಾರನ ದಸ್ತಗಿರಿ

ಬೆಂಗಳೂರು— ಫೋಟೊ ಸರ್ಟಿಫಿಕೇಟುಗಳನ್ನು ತೋರಿಸಿ ಹಲವು ಇಲಾಖೆಗಳನ್ನು ಮೋಸಗೊಳಿಸಿದ ಒಬ್ಬನನ್ನು ರಾಜ್ಯದ ಸಿಐಡಿಯವರು ದಸ್ತಗಿರಿಮಾಡಿರುವರು.

○

### ತೆರಿಗೆಗೆ ಬಡ್ಡಿ

ಮೈಸೂರು— ಸಾರ್ವಜನಿಕರಿಂದ ಬರಬೇಕಾದ ತೆರಿಗೆ ಬಾಕಿಗೆ 1968 ನೇ ಏಪ್ರಿಲ್‌ನಿಂದ ಶೇಕಡ 6 ರಂತೆ ಬಡ್ಡಿ ಹಾಕಲಾಗುವುದಂತೆ.

### ಉಪವಾಸ ಮುಕ್ತಾಯ

ಅಮೃತಸರ— ಚಂಡಿಘರಕ್ಕಾಗಿ ಸೋಮವಾರದಿಂದ ಉಪವಾಸ ಕೈಗೊಂಡಿದ್ದ ಸಂತ ಫತೇಸಿಂಗರು ನಿನ್ನೆ ಸಂಜೆ ಕಿತ್ತಳೆ ರಸ ಸೇವಿಸಿ ಉಪವಾಸ ಮುಕ್ತಾಯಗೊಳಿಸಿದರು.

○

### ಅಕಾಲ್ ತಖ್ತ್ ಮೇಲೆ ಧಾಳಿ

ಅಮೃತಸರ— ಪಂಜಾಬಿನ ಫಾಸಿಲ್ಯಾ ತಹಸೀಲನ್ನು ಹರಯಾಣಾಕ್ಕೆ ಕೊಡುವ ಕೇಂದ್ರ ಸರ್ಕಾರದ ನಿರ್ಧಾರವನ್ನು ಪ್ರತಿಭಟಿಸಿ ಸ್ವರ್ಣ ಮಂದಿರದ ಪವಿತ್ರ ಅಕಾಲ್ ತಖ್ತ್ ಮೇಲೆ ಕಲು ಬೀರುತ್ತಿದ್ದ ಗುಂಪನ್ನು ಬಿಚ್ಚುಕತ್ತಿ ಹಿಡಿದಿದ್ದ ಸೇವಾದಾರರು ಅಟ್ಟಿಕೊಂಡು ಹೋಗಿ ಚದುರಿಸಿದರು.

★

### ಹುತಾತ್ಮರ ದಿನ

ನವದೆಹಲಿ— ಮಹಾತ್ಮಾ ಗಾಂಧಿಯವರ ನಿಧನದ 22 ನೇ ವರ್ಷದ ದಿನ ನಿನ್ನೆ ಆಚರಿಸಲಾಯಿತು – ರಾಷ್ಟ್ರವು 2 ನಿಮಿಷ ಆಚರಿಸಿತು.

●

### ಗಿರಿಯವರ ಮೇಲಿನ ಮೊಕದ್ದಮೆ

ನವದೆಹಲಿ— ಸುಪ್ರೀಂ ಕೋರ್ಟಿನಲ್ಲಿ ರಾಷ್ಟ್ರಾಧ್ಯಕ್ಷ ಶ್ರೀ ಗಿರಿಯವರ ಮೇಲಿನ ಚುನಾವಣಾ ಅರ್ಜಿ ಬಗ್ಗೆ ಸೆಪ್ಟಂಬರ 16 ರಂದು ಸಾಕ್ಷ್ಯ ತೆಗೆದುಕೊಳ್ಳಲಾಗುವುದು

○

ಮಂಗಳೂರು - ಇಲ್ಲಿಂದ ಕಬ್ಬಿಣದ ಅದಿರನ್ನು ಯುಗೋಸ್ಲೊವಿಯಾಕ್ಕೆ ಸಾಗಿಸಲು ಭಾರತ ಹಡಗು ಸಂಸ್ಥೆಯ " ಭಾರತ ಜಯಂತಿ ' ಹಡಗು ಬಂದಿದೆ.

○

### ಹರಯಾಣಾದಲ್ಲಿ

ಚಂಡೀಘರ— ಕೇಂದ್ರದ ನಿರ್ಣಯ ಪ್ರತಿಭಟಿಸಿ ನಿನ್ನೆ ಹರತಾಳ ಏರ್ಪಾಟಾಗಿದ್ದ ಹರಯಾಣಾದಲ್ಲಿ ಅನೇಕ ಕಡೆ ಹಿಂಸಾಕೃತ್ಯ, ಅಗ್ನಿಸ್ಪರ್ಶ, ಲೂಟಿ ನಡೆದವು – 8 ಪಟ್ಟಣಗಳಲ್ಲಿ ಸಿವಿಲ್ ಅಧಿಕಾರಿಗಳ ನೆರವಿಗೆ ಸೈನ್ಯ ಕರೆಸಲಾಯಿತು - ರೇವಾರಿಯಲ್ಲಿ ಗೋಳೀಬಾರಿನಲ್ಲಿ 5 ಮಂದಿ ಸತ್ತರು – ರೈಲು ಓಡಾಟಕ್ಕೆ ಅಡ್ಡಿ ಪಡಿಸಲಾಯಿತು – 4 ರೈಲುಗಾಡಿಗಳನ್ನೂ ಒಂದು ಬಸ್ಸನ್ನೂ ಸುಡಲಾಯಿತು - ರೈಲ್ವೇ ವಿಶ್ರಾಂತಿ ಗೃಹವನ್ನು ಸುಡಲಾಯಿತು – ಪಂಜಾಬು ಮತ್ತು ಹರಯಾಣಾದಲ್ಲಿ 44 ರೈಲುಗಳ ಓಡಾಟ ರದ್ದು ಪಡಿಸಲಾಗಿತ್ತು ಸೇನಾಪೆಟ್‌ನಲ್ಲಿ ಹೊಸ ಕಾಂಗ್ರೆಸ್ಸಿನ ಪಾರ್ಲಿಮೆಂಟು ಸದಸ್ಯರು ಶ್ರೀ ರಣಧೀರ ಸಿಂಗ್ ಮತ್ತು ಶ್ರೀ ರಿಜಿಕ್‌ರಾರಿಯವರ ಮನೆಯನ್ನು ಸುಡಲಾಯಿತು.

○

### ದುರುಪಯೋಗವಾಗಿಲ್ಲ

ಬೆಂಗಳೂರು— ತಾವು 1968 ರಲ್ಲಿ ಅಭಾವ ಭಾಗಗಳಲ್ಲಿನ ಪರಿಹಾರದ ಮೇಲ್ವಿಚಾರಣೆ ನೋಡಿಕೊಳ್ಳುತ್ತಿದ್ದು, ಅನಾವೃಷ್ಟಿ ಪರಿಹಾರ ಹಣವು ದುರುಪಯೋಗವಾಗಿಲ್ಲವೆಂದು ಮುಖ್ಯ ಮಂತ್ರಿ ಶ್ರೀ ವೀರೇಂದ ಪಾಟೀಲರು ಶಾಸನಸಭೆಯಲ್ಲಿ ತಿಳಿಸಿದರು.

★

### ಕ್ರೀಡಾ ನೌಕೆ ಜೂಜು

ಪೂನಾ— ಎಂಜಿನೀರಿಂಗ್ ಸಮುದ್ರಯಾನಾ ಕ್ಲಬ್ಬಿನವರು ಮದರಾಸಿನಿಂದ ಪೋರ್ಟ್ ಬ್ಲೇರಿಗೆ ಕ್ರೀಡಾನೌಕಾ ಜೂಜು ನಡೆಸಲಿರುವರು - ಇದು ಸುಮಾರು 15 ದಿನ ಹಿಡಿಯುವುದು – ಎರಡು ಟೀಮುಗಳು ಭಾಗವಹಿಸಲಿವೆ.

# ಚಂಡೀಘರ್ ಪಂಜಾಬಿಗೆ ಸಿಕ್ಕಿತು

ಚಂಡೀಘರ ರಾಜಧಾನಿ ಪ್ರಾಜೆಕ್ಟ್ ಭಾಗವು ಪಂಜಾಬಿಗೆ ೫ ವರ್ಷಗಳಲ್ಲಿ ವರ್ಗಾಯಿಸಲಾಗುವುದೆಂದು ಕೇಂದ್ರ ಸರಕಾರ ಪ್ರಕಟಿಸಿದೆ – ಪ್ರಸ್ತುತ ಕೇಂದ್ರ ಪ್ರದೇಶವಾಗಿರುವ ನಗರಕ್ಕೆ ಸೇರಿಸಲಾಗಿರುವ ಪಂಜಾಬಿ ಮಾತನಾಡುವ ಭಾಗಗಳು ಪಂಜಾಬಿಗೆ ಕೊಡಲಾಗುವುದು – ಹರಯಾಣಾಕ್ಕೆ ಪಂಜಾಬಿನ ಫಿರೋಜಾಪುರ ಜಿಲ್ಲಾದ ಹಿಂದಿ ಭಾಷೆ ಮಾತನಾಡುವ ಫಾಸಿಲ್ಕ ತಾಸಿಲ್ ಮತ್ತು ಕೇಂದ್ರ ಪ್ರದೇಶದ ಹಿಂದಿ ಮಾತನಾಡುವ ಭಾಗಗಳು ಕೊಡಲಾಗುವುದು ; ಫಾಸಿಲ್ಕ ಭಾಗಕ್ಕೂ ಮಿಕ್ಕ ಹರಯಾಣಾಕ್ಕೂ ಸಂಬಂಧಿಸಿದಂತೆ ಕೇಂದ್ರ ಪ್ರದೇಶದ ಪಂಜಾಬು–ರಾಜಸ್ಥಾನ ಗಡಿಯಲ್ಲಿ ಒಂದು ಫರ್ಲಾಂಗು ಅಗಲದ ಭೂಮಿಯನ್ನು ಕೊಡಲಾಗುವುದು – ಹರಿಯಾಣಾಕ್ಕೆ ಹೊಸ ರಾಜಧಾನಿ ಕಟ್ಟಿಕೊಳ್ಳಲುರೂ 20 ಕೋಟಿ ( ಅರ್ಧ ಗ್ರಾಂಟು, ಅರ್ಧ ಸಾಲ ) ಕೊಡಲಾಗುವುದು – ಹರಯಾಣಾ ರಾಜಧಾನಿ ಕಟ್ಟಿಕೊಳ್ಳುವವರೆಗೆ ( 5 ವರ್ಷಕ್ಕೆ ಹೆಚ್ಚಿಲ್ಲ ) ಈಗಿನ ಚಂಡೀಘರದಲ್ಲಿ ಹರಿಯಾಣ ಕಚೇರಿಗಳು ಮತ್ತು ವಾಸ ಸ್ಥಾನಗಳನ್ನು ಹೊಂದಿರತಕ್ಕದ್ದು – ಈ ಕಾಲದಲ್ಲಿ ಕೇಂದ್ರದ ಪ್ರದೇಶವಾಗಿ ಉಳಿದಿರುವುದು.


ಪ್ರಮುಖ ವರ್ತಮಾನಗಳಿಗೆ ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ

ಅದರಲ್ಲಿ ಜಾಹಿರಾತು ಪ್ರಕಟನೆ ಲಾಭದಾಯಕ :

ಸ್ಥಳದಲ್ಲಿ ಚಂದಾ ತಿಂಗಳಿಗೆ 40 ಪೈಸೆ; ಅಂಚೆವೆಚ್ಚ ಸೇರಿ ವರ್ಷಕ್ಕೆ ರೂ 10-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 2


ಗೋರಕ್ಷಣಕ್ಕೆ ಚಂದಾ ಮತ್ತು ಡೊನೇರ್ಷ ಪಾವತಿಮಾಡುವ ಅಡ್ರೆಸ್

1 ಶ್ರೀ ಅನಂತನರಸಿಂಹಯ್ಯಂಗಾರ್, ಶಾಸ್ತ್ರಧರ್ಮಪ್ರಚಾರ ಸಭಾ
ಹೊಂಗನೂರು, ಚಾಮರಾಜನಗರ ತಾಲ್ಲೂ

2 ಶ್ರೀ ಬಿ ಜಿ ಶಾಸ್ತ್ರಿ, ಆಥರ್ ಮತ್ತು ಅಸ್ಯಾಲಜರ್, 180 ನ್ಯೂ ಬ್ಲಾಕ್,
ವಿದ್ಯಾರಣ್ಯಪುರಂ, ಮೈಸೂರು.

3. ಡಾ ॥ ಪಿ ಎಸ್ ನಾರಾಯಣ್, ಮತ್ತು ಪಿ ಎಸ್. ವಿಶ್ವನಾಥ್,
ಪ್ರಾಣಿದಯಾ ಪ್ರಚಾರಕರು, 320 – 5 ನೆ ಬ್ಲಾಕ್, ಜಯನಗರ, ಬೆಂಗಳೂರು

ಗೋರಕ್ಷಣ ಆಫೀಸ್, ಸತ್ಯವಾದಿಪ್ರೆಸ್ ಚಾಮರಾಜಪುರಂ, ಮೈಸೂರು 4


Quality Printing — Neat Binding

**Lakshminarasimha Press**

Sivarampet, Mysore


**Protect the Cow**

**Help The Gorakshana**

## ಅಖಿಲ ಭಾರತದಲ್ಲಿ ಕೂಡಲೇ ಗೋವಧೆ ನಿಷೇಧವಾಗಲಿ

## ದೇಶದ ಹಿತಕ್ಕಾಗಿ ಕುಟುಂಬ ಯೋಜನೆ


**ವುಡ್‌ಲ್ಯಾಂಡ್** ಅಮೋಘ 5 ನೇ ವಾರ

ಅಮೋಘ ಪ್ರಾರಂಭ

.... ತುಂಬಿದ ಚಿತ್ರಮಂದಿರಕ್ಕೆ ಪ್ರದರ್ಶಿತವಾಗುತ್ತಿದೆ ....

ಓರ್ವ ಹೆಣ್ಣಿನ ಮನಕರಗುವ ಸನ್ನಿವೇಶಗಳಿಂದ ಕೂಡಿದ ಅಮೋಘ ಕನ್ನಡ ಚಿತ್ರ

**ಗೆಜ್ಜೆಪೂಜೆ**

ನಟವರ್ಗ– ಕಲ್ಪನ, ಅಶ್ವಥ್, ಬಾಲಕೃಷ್ಣ, ಪಂಡರಿಬಾಯಿ

[ ದಿನ 3 ಪ್ರದರ್ಶನಗಳು ]

**ಅಪೆರಾ** ಅಮೋಘ 2ನೇ ವಾರ

.... ಅತ್ಯಮೋಘ ಕನ್ನಡ ಚಿತ್ರ ....

**ಭಲೇ ಕಿಲಾಡಿ**

ಪಾತ್ರ : ನರಸಿಂಹರಾಜು ರಂಗ ವೆಂಕಟೇಶ್

ಕಥೆ – ಸಂಭಾಷಣೆ : ಹುಣಸೂರ್ ಕೃಷ್ಣಮೂರ್ತಿ

ದಿಗ್ದರ್ಶನ : ಎ. ನಾಗರಾಜ್

ದಿನ 3 ಆಟಗಳು

**SHAKTI SUDHA**

**A Superb Tonic**




ಗೋರಕ್ಷಣೆ ಮತ್ತು ಪ್ರಾಣಿದಯಾ ಕಾರ್ಯಗಳು ಹೆಚ್ಚೆಚ್ಚಾಗಿ ನಡೆಯಲೆ

ಗೋರಕ್ಷಣಕ್ಕೆ ಬೆಂಬಲ ನೀಡಿ


Edited, Printed & Published by Dharmaprachara Nirata M S Krishna Rao ( Proprietor ) at the Satyavadi Press Chamarajapuram, Mysore